

ಮತ್ತೆ... ನೀವೇಕೆ ಹೀಗೆ ಸುಮ್ಮನಾಗಿಬಿಟ್ಟಿರಿ? ನನ್ನ ಹಾಗೂ ನಿಮ್ಮ ನಡುವಿನ ಸಂವಾದ ಸೇತುವಿನ ಆಚೆ ಕಡೆಯ ಆಸರೆಯನ್ನು ಹೀಗೇಕೆ ಒಮ್ಮೆಲೇ ತುಂಡರಿಸಿಬಿಟ್ಟಿರಿ? ನಾನು ಈಗಲೂ ನೀವು ಆರಿಸಿದ್ದ ಬಣ್ಣಗಳಿಂದಲೇ ಕನಸನ್ನು ನೇಯುತ್ತಿರುವೆ... ನೀವು ಗುನುಗಿದ ಗೀತೆಗಳನ್ನೇ ನನ್ನ ತುಟಿಯ ಮೇಲಿರಿಸಿಕೊಂಡಿರುವೆ ಈಗಲೂ. ನಿಮಗಾಗಿ ಪ್ರಾರ್ಥಿಸಲು ಬಂದಿದ್ದ ಆ ದಾರಿ... ಆ ಮಂದಿರ, ಮಂದಿರದ ಎದುರಿನ ಮರ, ಆ ಮರದ ಕೊಂಬೆ... ಎಲ್ಲವೂ ನೆನಪಿದೆ. ಇನ್ನೇನು ಒಣಗಿಹೋಗಬೇಕೆಂದಿರುವ ಮರದ ಕೆಲವು ರೆಂಬೆಗಳಲ್ಲಿಯೂ ಹಸುರು ಚಿಗುರು ಕೊನರುವುದನ್ನು ನಾನು ಕಂಡಿದ್ದೇನೆ. ಹಾಗೇನೇ ಆಸೆ ಮತ್ತು ವಿಶ್ವಾಸಗಳು ಜೀವನದ ಒಣಗಿದ ರೆಂಬೆಯಲ್ಲಿಯೂ ಹಸುರು ಚಿಮ್ಮುವ ಹಾಗೆ ಮಾಡುತ್ತವೆ ಎಂದು ನಾನು ನಂಬಿರುವೆ.

ನಿಮ್ಮ ಚಿಕ್ಕ ಚಿಕ್ಕ ಚೀಟಿಯಂತಹ ಪತ್ರಗಳನ್ನು ನಾನು ಇಂದಿಗೂ ಸುರಕ್ಷಿತವಾಗಿ ಇರಿಸಿದ್ದೇನೆ. ಆ ಪತ್ರಗಳಲ್ಲಿನ ಒಂದೊಂದು ಪದಗಳನ್ನು ಪದೇಪದೇ ಅದೆಷ್ಟೋ ಸಾರಿ ಓದುತ್ತೇನೆ. ಆಗೆಲ್ಲಾ ಈ ಪತ್ರಗಳಲ್ಲಿ ಬರೆದಿರುವುದು ನಿಜವೇ? ಹೌದೆಂದಾದಲ್ಲಿ ಮತ್ತೆ ಈ ಮೌನ, ಅಂತರವೇಕೆ ಎಂದು ನೆನೆದು ನನ್ನ ಕಣ್ಣುಗಳು ಒದ್ದೆಯಾಗುತ್ತವೆ... ನಿಮ್ಮವಳಾಗಿಯೂ ಆಗದೇ ಇರುವ ಈ ಪರಿಸ್ಥಿತಿ ಏಕೆ?

ನನ್ನ ಈ ಎಲ್ಲಾ 'ಏಕೆ'ಗಳಿಗೆ ಉತ್ತರ ಸಿಗುತ್ತಿಲ್ಲವೇಕೆ? ಇಂತಹ ಹೊತ್ತಿನಲ್ಲಿ ನೀವು ಪೂಜಿಸುವ ಎಲ್ಲಾ ದೇವತೆಗಳು ನನಗೆ ನೆನಪಾಗುತ್ತಾರೆ. ಆಗ ನಾನು ಆ ದೇವತೆಗಳ ಮೌನದಲ್ಲಿಯೂ ನಿಮ್ಮನ್ನು ಅರಸುತ್ತಾ ಅಲೆಯುತ್ತೇನೆ. ಆ ನಿಮ್ಮ ದೇವತೆಗಳನ್ನು ಒಮ್ಮೆಯಾದರೂ ನಾನು ಸ್ಪಂದಿಸುವೆನೆ? ನನಗೆ ನನ್ನ ಪ್ರಶ್ನೆಗಳಿಗೆ ಉತ್ತರ ಬೇಕು. ಏಕೆಂದರೆ ಆ ಉತ್ತರಗಳಲ್ಲಿ ನನ್ನ ಪ್ರಾಣ ಅಡಗಿದೆ. ನೀವು ನೋಡು ನೋಡುತ್ತಲೇ ಆ ಮೌನದಲ್ಲಿಯೇ ನಾನು ಇಲ್ಲವಾಗಿ ಬಿಡುತ್ತೇನೆ.

ನನಗೆ ಗೊತ್ತಿದೆ... ಒಂದಲ್ಲ ಒಂದು ದಿನ ಎಲ್ಲವೂ ಅಂತ್ಯವಾಗಿಬಿಡುತ್ತದೆ. ಆದರೆ ನಾನು ನಿಮ್ಮಲ್ಲಿ ಅಂತ್ಯವಾಗಬಯಸುತ್ತೇನೆ. ಏಕೆಂದರೆ ನಾನು ಇಲ್ಲವಾಗಿ ನಿಮ್ಮೊಳಗೆ ಇರಬಯಸುತ್ತೇನೆ. ನಿಮ್ಮ ಗಂಧದೊಳಗೆ ನಾನು ಕರಗಿ ಹೋಗಬಯಸುತ್ತೇನೆ.

ನೀವಿಲ್ಲದೆ ಏಕಾಂತವೆಂಬ ಜೀರುಂಡೆ ಶಬ್ದ ನನ್ನನ್ನು ಹುಚ್ಚಿಯನ್ನಾಗಿಸುತ್ತದೆ. ಸಾವಿರಾರು ಬಾವಲಿಗಳು ನನ್ನ ಸುತ್ತಲೂ ಹಾರಾಡುತ್ತಾ ನನ್ನ ರಾತ್ರಿಗಳನ್ನು ಅಪಹರಿಸುತ್ತಿವೆ. ನಾನೂ ಕೂಡ ಅವುಗಳ ಹಾಗೆ ಅಲೆದಾಡ ಬಯಸುತ್ತೇನೆ. ಇಲ್ಲ... ಇಲ್ಲ... ಅವುಗಳು ಅಲೆಯುತ್ತಿಲ್ಲ. ಅಲ್ಲೇ ಇವೆ... ನಾನೇ ಅಲೆಯುತ್ತಿದ್ದೇನೆ. ನನ್ನ ಶುಷ್ಕ ಕಂಠ ನೀರಿಗಾಗಿ ಆಕಾಶದಲ್ಲಿ ಮೋಡಗಳನ್ನರಸುತ್ತಿದೆ. ಈ ಬಾಯಾರಿಕೆ ಸಾಗರದಷ್ಟು ಆಳ–ಅಗಲವಾಗುತ್ತಿದೆ. ಈ ಸಾಗರದಲ್ಲಿ ನಾನು ಮುಳುಗಿಹೋಗದ ಹಾಗೆ ದಯವಿಟ್ಟು ತಡೆಯಿರಿ. ಈ ಬಾಯಾರಿಕೆ ಸಾಗರವಾಗುವುದನ್ನು ತಡೆಯಿರಿ ದಯವಿಟ್ಟು. ಆಕಾಶದಲ್ಲಿ ಕೋರೈಸುವ ಮಿಂಚು ಭೂಮಿಯೊಡನೆ ಸಂಧಿಸಲು ಮೋಡಕ್ಕೆ ಕರೆಕೊಡುವ ಹಾಗೆ ನನಗೂ ಕೂಡ ನಿಮ್ಮನ್ನು ಎಲ್ಲಾ ದಿಕ್ಕಿನಿಂದಲೂ ಕರೆಯುವ ಮನಸ್ಸಾಗುತ್ತದೆ. ಆದರೆ ಒಮ್ಮೆ ಪಕ್ಕದ ಮನೆಯಾಕೆ ತನ್ನ ಮಗಳಿಗೆ 'ನಿನ್ನ ಪ್ರೀತಿ ಪಾತ್ರರನ್ನು ಹೆಸರು ಹಿಡಿದು ಕರೆಯಬಾರದು. ಹಾಗೆ ಮಾಡಿದರೆ ಅವರ ಆಯಸ್ಸು ಕಡಿಮೆಯಾಗುತ್ತದೆ' ಎಂದು ಹೇಳಿದ ಮಾತು ನೆನಪಾಗಿ ನಿಮ್ಮನ್ನು ಹೆಸರು ಹಿಡಿದು ಕರೆಯುವುದನ್ನು ಅಂದೆ ನಿಲ್ಲಿಸಿಬಿಟ್ಟೆ. ಹಾಗಾಗಿ ನೀವು ನೆನಪಾದಾಗಲೆಲ್ಲ ನಾನು ನಿಮ್ಮನ್ನು 'ಓ... ಮನಸೇ' ಎನ್ನುತ್ತೇನೆ.

ಆ ದಿನವನ್ನು ನಾನೆಂದೂ ಮರೆಯಲಾರೆ... ಅವತ್ತು ನೀವು ಆ ದೀರ್ಘ ಪ್ರಯಾಣ ಮುಗಿಸಿ ಸುಡುಸುಡು ಉರಿಬಿಸಿಲಿನ ಮಧ್ಯಾಹ್ನ ನನ್ನಲ್ಲಿಗೆ ಬಂದಾಗ ಮೈ ಮುಖವೆಲ್ಲ ಬೆವರು ಬಸಿದು ಉಪ್ಪು ಗಟ್ಟಿಹೋಗಿತ್ತು. ಇದ್ದಕ್ಕಿದ್ದ ಹಾಗೆ ನಿಮ್ಮನ್ನು ಎದುರಿನಲ್ಲಿ ನೋಡಿದ ನಾನು ಹೌಹಾರಿ ಚಂಗನೆ ಹಾರಿ ಹೋಗಿ ಒಂದು ಲೋಟ ತಣ್ಣನೆಯ ನೀರನ್ನು ತಂದು ನಿಮ್ಮ ಕೈಗಿತ್ತಿದ್ದೆ. ಆಗ ನೀವು ನನ್ನನ್ನು ನೋಡಿದ ನೋಟ ನನಗೆ ಹುಚ್ಚು ಹಿಡಿಸಿಬಿಟ್ಟಿತ್ತು. ನಾನು ನೋಡುತ್ತಲೇ ಇದ್ದೆ... ನೀವು ನೀರು ಕುಡಿಯಲು ಲೋಟದ ಯಾವ ಕಡೆ ಅದನ್ನು ನಿಮ್ಮ ತುಟಿಗೆ ತಾಗಿಸಿಕೊಳ್ಳುತ್ತೀರೆಂದು... ಏಕೆಂದರೆ ನೀವು ಹೊರಟುಹೋದ ಮೇಲೆ ಆ ಲೋಟಕ್ಕೆ ನಿಮ್ಮ ತುಟಿ ತಾಗಿದ ಭಾಗದ ಆರ್ದ್ರತೆಯನ್ನು ನನ್ನ ತುಟಿಗೆ ಅಂಟಿಸಿಕೊಳ್ಳುವಾಸೆಯಿಂದ.

ನಿಮಗೂ ನೆನಪಿರಬಹುದು ತಾನೆ...! ಆ ಹೊತ್ತು ನೀವು ಹೇಗೆ ನನ್ನನ್ನು ಬರಸೆಳೆದು ತನ್ನ ಬಾಹುಗಳಲ್ಲಿ ತುಂಬಿಕೊಂಡಿದ್ದಿರಿ... ಮತ್ತೆ... ಆರ್ದ್ರತುಟಿಗಳಿಂದ ನನ್ನ ತುಟಿಗಳನ್ನು ತೇವಗೊಳಿಸಿದ್ದಿರಿ ಎಂದು...! ಅದಾದ ಬಳಿಕ ನೀವು ಹೊರಟುಹೋದಿರಿ. ಆದರೆ ನಾನು ಪ್ರಜ್ಞಾಹೀನಳಾದಂತೆ ನಿಂತಲ್ಲೇ ಅದೆಷ್ಟೋ ಹೊತ್ತು ಗರಬಡಿದವಳ ಹಾಗೆ ನಿಂತೇ ಇದ್ದೆ. ನಿಧಾನವಾಗಿ ನೆನಪಾಯಿತು ನಿಮ್ಮ ತುಟಿಯ ಬೆವರಿನ ಉಪ್ಪಿನ ಅಂಶ ನನ್ನ ತುಟಿಗೂ ಅಂಟಿದೆ...

ಜೇಷ್ಠಮಾಸದ ಉರಿಬಿಸಿಲಿನ ಸುಡು ಮಧ್ಯಾಹ್ನದ ಬೆವರಿನ ಲವಣಾಂಶದೊಂದಿಗೆ ನೀವು ಬಂದಿದ್ದೀರಿ... ಜೊತೆಗೆ ನಿಮ್ಮ ಬೆವರನ್ನು ನನ್ನ ತುಟಿಗೆ ಅಂಟಿಸಿ ಹೋಗಿದ್ದೀರಿ. ಈಗಲೂ ಅದು ಹಾಗೆಯೇ ಇದೆ. ಈಗ ನಾನು ಆ ಉಪ್ಪಿನ ಋಣವನ್ನು ತೀರಿಸಬೇಕಾಗಿದೆ... ನಿಮ್ಮ ತುಟಿಗೆ ನನ್ನ... ನಿಮ್ಮ ಬಾಹುಬಂಧನದಲ್ಲಿ ಬಂದಿಯಾಗಿ... ಪ್ರಜ್ಞಾಹೀನಳಂತಾಗಿ.

ಓ... ಮನಸೇ, ಕೇಳಿಸಿಕೊಳ್ಳುತ್ತಿರುವೆಯಲ್ಲ ನನ್ನ ಕರೆಯನ್ನು...! ಕರೆಯುತ್ತಲೇ ಇರುವೆ. ಸಮಯದ ಒಂದೊಂದು ಗಳಿಗೆಯೂ ನನ್ನನ್ನು ಕಾತರತೆ ಶಿಖರಕ್ಕೇರಿಸಿ ಹಗಲು ರಾತ್ರಿಯೆನ್ನದೆ ಕಾಡುತ್ತವೆ. ಮತ್ತೆ ನಿರಾಸೆ, ಉದಾಸೀನತೆಯ ಆಳಕ್ಕೆ ಇಳಿದು ಹೋಗಿಬಿಡುತ್ತೇನೆ.

ನಂತರ ಪುನಃ ಆಸೆ ಚಿಗುರೊಡೆದು ನಿಮ್ಮ ಆಗಮನದ ನಿರೀಕ್ಷೆಯ ಬೆನ್ನೇರುತ್ತೇನೆ. ಏಕೆಂದರೆ ನನಗಿನ್ನೂ ನೆನಪಿದೆ... ನೀವೇ ಹೇಳಿದ್ದೀರಿ... ನಿನ್ನದೆಂಬುದು ನನ್ನದಾಗಿಯೇ ತೀರುತ್ತದೆ... ಹೌದು ನೀವು ಬಂದೇ ಬರುತ್ತೀರಿ. ನನ್ನ ಆಸೆಯೆಂಬ ದಾರ ಎಳೆದಷ್ಟೂ ತುಂಡಾಗದೆ ಗಟ್ಟಿಯಾಗಿಯೇ ಇದೆ.

ಈಗ ಮತ್ತೊಮ್ಮೆ ಗಟ್ಟಿಯಾಗಿ ಹೇಳುತ್ತೇನೆ... ರಾತ್ರಿಗೆ ಅಂಧಕಾರದೊಂದಿಗೆ ಇರುವ ಪ್ರೀತಿಯ ಹಾಗೆ, ಮಾಘ ಮಾಸದ ಚಳಿಗೆ ಮಂಜಿನ ಹನಿಯ ಜೊತೆ ಪ್ರೀತಿ ಇರುವ ಹಾಗೆ ನನಗೂ ನಿಮ್ಮ ಬಗ್ಗೆ ಗಾಢ ಪ್ರೇಮವಿದೆ.

ಆ ದಿನ ಗೋಧೂಳಿಯ ಹೊತ್ತಿನಲ್ಲಿ ನೀವು ನನ್ನ ಕೈಗಳನ್ನು ನಿಮ್ಮ ಕೈಗಳಲ್ಲಿ ತುಂಬಿಕೊಂಡಿದ್ದಾಗ ನಿಮ್ಮ ಕೈಗಳ ಪರಿಮಳವನ್ನು ನನ್ನ ಹಸ್ತಗಳ ರೇಖೆಗಳೆಂಬ ಹೂದೋಟದಲ್ಲಿ ಬಿತ್ತಿದ್ದೆ. ಈಗ ಆ ಪರಿಮಳ ನನ್ನ ಉಸಿರಿನಲ್ಲಿ ಬೆರೆತುಹೋಗಿದೆ. ಆ ಉಸಿರಿನಲ್ಲಿಯೇ ಇಂದು ಬದುಕಿದ್ದೇನೆ. ನಿಮ್ಮ ನಿರೀಕ್ಷೆಯಲ್ಲಿ.

ನಮ್ಮ ಈ ಸ್ನೇಹ ಇಂದು ನಿನ್ನೆಯದಲ್ಲ, ಶತಮಾನಗಳಷ್ಟು ಹಳೆಯದು. ಇದು ಇಲ್ಲೀತನಕ ಮೌನವಾಗಿತ್ತು. ಇನ್ನು ಮುಂದೆ ಹಾಗಾಗುವುದಿಲ್ಲ. ಈ ಸ್ನೇಹ ಪ್ರತಿಕ್ಷಣ ನಮ್ಮ ಪ್ರೀತಿಯ ಕಥೆಯನ್ನು ಹೆಣೆಯುತ್ತಿರುತ್ತದೆ. ನಮ್ಮ ಪ್ರೇಮ ನೀಲಿ ಸಾಗರದಷ್ಟು ಆಳ... ಇದರಲ್ಲಿ ಆಕಾಶ ಕೂಡ ತನ್ನ ಪ್ರತಿಬಿಂಬವನ್ನು ಕಾಣುತ್ತಿರುತ್ತದೆ.

ಆದರೆ ನಾನು ವ್ಯಥೆಯ ಒಂದು ಸ್ವರವಾಗಿ ಆಕಾಶದ ಕಡೆಗೆ ನೋಡುತ್ತಿರುತ್ತೇನೆ... ನೀಲಿ ಸಾಗರದ ತೀರದಲ್ಲಿ ನಿಂತ ಒಂದು ಅಪರಿಚಿತ ನಾವೆಯ ಹಾಗೆ... ಮತ್ತು ಅದು ತನ್ನ ನಾವಿಕನ ಆಗಮನದ ನಿರೀಕ್ಷೆ ಹೊತ್ತು ಕಾಯುತ್ತಿರುವ ಹಾಗೆ.

ಪ್ರತಿಕ್ರಿಯಿಸಿ: **feedback@sudha.co.in**